







ಹೊರ ಬರುವಂತಿರಬೇಕು. ಇದನ್ನು ಗಮನದಲ್ಲಿರಿಸಿಕೊಂಡು ಖರೀದಿಸಬೇಕು. ಅದರ ಜೊತೆಗೆ ಯಾವುದೇ ಪೆಂಡೆಂಟ್ ಆಗಿರಲಿ ಅದನ್ನೇ ಹೋಲುವ ಮ್ಯಾಚಿಂಗ್ ಕಿವಿಯೋಲೆ ಇದ್ದಾಗ ಎದ್ದು ಕಾಣುತ್ತದೆ.

ಸಾಧಾರಣವಾಗಿ ರೌಂಡ್ ಓವೆಲ್ ಶೇಪ್‌ನ ಪೆಂಡೆಂಟ್‌ಗಳಲ್ಲಿ ಈ ವಿ ರಿಂಗ್ ಕಾಣಬಹುದು. ತುಂಬಾ ಭಾರ ಇರದ ಹರಳುಗಳನ್ನು ಹೊಂದಿದ ಪೆಂಡೆಂಟ್‌ಗಳಿಗೆ ಇದು ಸೂಕ್ತ. ಜೀನ್ಸ್, ಸ್ಕರ್ಟ್, ಫ್ರಾಕ್‌ಗಳಂತಹ ಧಿರಿಸುಗಳಿಗೆ ಚೆನ್ನ. ಈಗೀಗ ಸಿಂಗಲ್ ದೊಡ್ಡ ಸ್ಟೋನ್ ಪೆಂಡೆಂಟ್ ಬಹಳ ಚಾಲ್ತಿಯಲ್ಲಿದೆ.

ಎರಡು ಬದಿ ಹುಕ್ ಇರುವ ಪೆಂಡೆಂಟ್

ಸಾಧಾರಣ ಲಾಂಗ್ ಹಾರಮ್, ಸರ, ಮುತ್ತಿನ ಎರಡೆಳೆ ಸರ ಇಂತಹ ಸರಗಳಲ್ಲಿ ಹೊಂದಿಕೊಳ್ಳುವ ಪೆಂಡೆಂಟ್ ಇದು. ಎರಡು ಬದಿ ಹುಕ್ ಇದ್ದು ನೀಟಾಗಿ ಎದೆ ಮಟ್ಟದಲ್ಲಿ ಕೂರುತ್ತದೆ. ಸರಗಳ ಕೆಳಭಾಗದಲ್ಲಿ ರಿಂಗ್ ಇದ್ದು ಪೆಂಡೆಂಟ್‌ನಲ್ಲಿರುವ ಎಸ್ ಹುಕ್‌ಗಳ ಸಹಾಯದಿಂದ ಇದನ್ನು ಬಂಧಿಸಲಾಗುತ್ತದೆ. ಆಗ ಬೇಕಾದಲ್ಲಿ ಬೇರೆ ಬೇರೆ ತರಹದ ಎರಡು ಹುಕ್ ಇರುವ ಪೆಂಡೆಂಟ್‌ಗಳನ್ನು ಧರಿಸಬಹುದು. ಇದು ಸರಗಳು ಅಗಲವಾಗಿ ನಿಲ್ಲುವಂತೆ ಸಹಕರಿಸುತ್ತದೆ. ಜೊತೆಗೆ ಕೊರಳಿಗೆ ಟೈಟ್ ಆಗಿ ಚೋಕರ್, ನೆಕ್ಲೇಸ್ ಧರಿಸಿದಾಗ ಬಹಳ ಅಂದವಾಗಿ ಕಾಣುತ್ತದೆ. ಸಮಾರಂಭಗಳಲ್ಲಿ ಎರಡು ಸರಗಳು ಸೀರೆ, ಲೆಹಂಗಾ, ಹಾಫ್ ಸಾರಿಗಳಲ್ಲಿ ಬಹಳ ಅಂದವಾಗಿ ಹೊಂದಿಕೊಂಡು ಮುಖದ ಶೋಭೆಯನ್ನು ಹೆಚ್ಚಿಸುತ್ತದೆ. ಆಂಟಿಕ್ ಪೆಂಡೆಂಟ್, ಮುತ್ತಿನ ಗಿಳಿಯೋಲೆ ಪೆಂಡೆಂಟ್ ಸಾಧಾರಣವಾಗಿ ಬಳಕೆಯಲ್ಲಿದೆ.

## ಎರಡು ರಿಂಗ್ ಪೆಂಡೆಂಟ್

ಮೇಲೆ ಹೇಳಿದ ರೀತಿಯಲ್ಲಿ ಇದು ಭಿನ್ನವಾದದ್ದು. ಈ ತರದ ಪೆಂಡೆಂಟ್‌ನಲ್ಲಿ ಎರಡೂ ಬದಿ ವೃತ್ತಾಕಾರದ ಎರಡು ರಿಂಗ್‌ಗಳು ಇದ್ದು ಚೈನ್‌ನಲ್ಲಿ ಎರಡು ಹುಕ್‌ಗಳು ಇದ್ದಾಗ ಧರಿಸುವಂತಹದ್ದು. ಡಾಲರ್ ಪೆಂಡೆಂಟ್, ಹರಳುಗಳು ಅಧಿಕವಾಗಿದ್ದು ದೊಡ್ಡದಾದ ಪೆಂಡೆಂಟ್‌ಗಳಿಗೆ ಸೂಕ್ತವಾಗಿರುತ್ತದೆ. ಎರಡು ರಿಂಗ್‌ಗಳಲ್ಲಿರುವ ಪೆಂಡೆಂಟ್‌ಗಳು ಹಾರಮ್, ಸರಗಳಲ್ಲಿ ಬೆಸುಗೆ ಹಾಕಿ ಧೃಡಗೊಳಿಸಿ ಹಾಕಲು ಸರಿಯಾಗಿರುತ್ತದೆ.(ಆಗ ಪೆಂಡೆಂಟ್‌ನ್ನು ಪ್ರತ್ಯೇಕಿಸಲು ಆಗುವುದಿಲ್ಲ) ಹಿರಿಯರಿಗೆ ಪದೇ ಪದೇ ಸಾಧಾರಣವಾಗಿ ಪೆಂಡೆಂಟ್‌ಗಳನ್ನು ಜೋಡಿಸಿಕೊಂಡು ತೊಡಲು ಕಷ್ಟವಾಗುತ್ತದೆ. ಇದು ಸುಲಭ. ಹುಕ್‌ಗಳಿದ್ದಲ್ಲಿ ಜೋಪಾನವಾಗಿ ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು.

## ಬಾಲಾಜಿ ಹುಕ್

ಕೆಲವೊಮ್ಮೆ ದಪ್ಪಗಿನ ಹರಳಿನ 12 ರಿಂದ 20 ಎಳೆಗಳನ್ನು ಒಟ್ಟಿಗೇ ಧರಿಸಬೇಕೆಂದು ಮನದಾಸೆ ಇರುತ್ತದೆ. ಆದರೆ ಅದರಲ್ಲಿ ಚೆನ್ನವೂ ಇರಬೇಕು ಅದರ ನೋಟ ತುಂಬಾ ಸುಂದರವಾಗಿರುತ್ತದೆ. ಚೆನ್ನದ ಪೆಂಡೆಂಟ್‌ನ್ನು ಹೇಗೆ ಇದರಲ್ಲಿ ಪೋಣಿಸುವುದು ಆಗ ಪೆಂಡೆಂಟ್‌ನಲ್ಲಿರುವ ದೊಡ್ಡ ಹುಕ್‌ನ್ನು ಎತ್ತಿ ಎಳೆಗಳನ್ನು ಅದರ ಒಳಗೆ ಸೇರಿಸಿ ಪುನಃ ಟೈಟ್ ಮಾಡುವಂತಹ ಒಂದು ಹುಕ್ ಇದ್ದಾಗ ಚೆನ್ನ ಅದುವೇ ಬಾಲಾಜಿ ಹುಕ್. ಭದ್ರತೆಯ ದೃಷ್ಟಿಕೋನದಿಂದ ಸ್ವಲ್ಪ ಗಟ್ಟಿಯಾಗಿರಲಿ. ಏಕೆಂದರೆ ಹುಕ್‌ನ್ನು ಮೇಲೆ ಎತ್ತುವಾಗ ತುಂಡಾಗದಂತೆಯೂ ಇರಬೇಕು ಮತ್ತೆ ಸದೃಢವಾಗಿ ಕೂರಬೇಕು.

ಪೆಂಡೆಂಟ್‌ಗಳು ಎಲ್ಲಾ ವಯಸ್ಸಿನವರಿಗೂ ಸರಿಹೊಂದುವಂತಹದ್ದು ಜೊತೆಗೆ ಪೂಜೆ, ಪಾರ್ಟಿ, ಸಮಾರಂಭ ಯಾವುದೇ ಇರಲಿ ಹಾಕಿ ಸಂಭ್ರಮಿಸಬಹುದು. ಅಲ್ಲದೆ 2 ಅಥವಾ 3 ಸೆಟ್‌ಗಳಿಗೆ ಒಂದೇ ಸರ ಸಾಕು. ಪದೇ ಪದೇ ಸೇಫ್ ಲಾಕರ್‌ಗೆ ಹೋಗಿ ತರಬೇಕಾದ ಅವಶ್ಯಕತೆಯೂ ಇಲ್ಲ. ಮನೆಯಲ್ಲೇ ಇಟ್ಟುಕೊಳ್ಳಬಹುದು.